**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ: 03.10.2025**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

ಸಾಕ್ಷಿದಾರರು ಗುರುತಿಸಿದ 9 ಔಷದಿ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ-12 ಎಂದು ಹಾಗೂ 11 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿ-13 ಎಂದು, ಅರ್ಜಿದಾರರ ಆಧಾರ್ ಕಾರ್ಡಿನ ನೋಟರೈಸಡ್ ಪ್ರತಿಯನ್ನು ಮೂಲ ಆಧಾರ್ ಕಾರ್ಡಿನೊಂದಿಗೆ ತಾಳೆ ಮಾಡಿ ತಾಳೆಯಾದ ಕಾರಣ ಅದನ್ನು ನಿಪಿ-14 ಎಂದು, ಅರ್ಜಿದಾರರ ಬ್ಯಾಂಕ್ ಪಾಸ್ ಪುಸ್ತಕದ ನೋಟರೈಸಡ್ ಪ್ರತಿಯನ್ನು ಮೂಲ ಬ್ಯಾಂಕ್ ಪುಸ್ತಕದೊಂದಿಗೆ ತಾಳೆ ಮಾಡಿ ತಾಳೆಯಾದ ಕಾರಣ ಅದನ್ನು ನಿಪಿ-15 ಎಂದು, ಅರ್ಜಿದಾರರ ಪ್ಯಾನ್ ಕಾರ್ಡಿನ ನೋಟರೈಸಡ್ ಪ್ರತಿಯನ್ನು ಮೂಲ ಪ್ಯಾನ್ ಕಾರ್ಡಿನೊಂದಿಗೆ ತಾಳೆ ಮಾಡಿ ತಾಳೆಯಾದ ಕಾರಣ ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

**ಪಾಟಿ ಸವಾಲು :1ನೇ ಎದುರುದಾರರ ಪರ ವಕೀಲರಿಂದ:**

1ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರಿ. ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲು : 2ನೇ ಎದುರುದಾರರ ಪರ ಶ್ರೀ ಎಎಂಎಂ ವಕೀಲರಿಂದ:**

ನನಗೆ ಯಾರ ಬಳಿ ಕೆಲಸ ಸಿಗುತ್ತದೆಯೋ ಅವರ ಬಳಿ ನಾನು ಕಾರು ಡ್ರೈವರ್ ಆಗಿ ಹೋಗಿ ಕೆಲಸ ಮಾಡುತ್ತಿದ್ದೆ. ನನ್ನ ಬಳಿ ಕಾರು ಚಾಲನ ಪತ್ರ ಇದ್ದು ಅಪಘಾತ ಸಂಭವಿಸಿದಾಗ ಅದು ಕಳೆದು ಹೋಗಿರುತ್ತದೆ. ಅಪಘಾತ ಸಂಭವಿಸಿದ ನಂತರ ನಾನು ಕಾರು ಚಾಲನೆ ಮಾಡುತ್ತಿಲ್ಲದ ಕಾರಣ ನಾನು ಕಳೆದು ಹೋದ ನನ್ನ ಚಾಲನಾ ಪತ್ರದ ಪ್ರತಿಯನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ನನಗೆ ನಡೆದುಕೊಂಡು ಓಡಾಡಲು ಆಗುತ್ತದೆ ಎಂದರೆ ಸರಿ. ನನಗೆ ಆಗಿದ್ದ ಎಲ್ಲಾ

ಗಾಯಗಳು ಈಗ ವಾಸಿ ಆಗಿರುತ್ತವೆ ಎಂದರೆ ಸರಿಯಲ್ಲ.  ನಾನು ಊರುಗೋಲು ಬಳಸುವುದಿಲ್ಲ ಎಂದರೆ ನಾನು ಅದನ್ನು ಈ ದಿನ ತಂದಿಲ್ಲ. ನನಗೆ ಊರುಗೋಲಿನ ಅವಶ್ಯಕತೆ ಇಲ್ಲದೆ ಚೆನ್ನಾಗಿ ನಡೆದಾಡುತ್ತೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ತಿಂಗಳಿಗೆ 30 ಸಾವಿರ ರೂ ಹೊಂದಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನಗೆ ಡಿಕ್ಕಿಯಾದ ಬೈಕು ನನ್ನ ಹಿಂಬದಿಯಿಂದ ಬಂದಿರುತ್ತದೆ. ಅಪಘಾತ ಸಂಭವಿಸಿದ ದಿನ ನಾನು ದೂರು ದಾಖಲು ಮಾಡಿಲ್ಲ. ಅಪಘಾತ ಸಂಭವಿಸಿದ ಮರುದಿನ ನನ್ನ ತಮ್ಮ ದೂರು ದಾಖಲ್ಮಾಡಿರುತ್ತಾನೆ. ಅಪಘಾತ ಸಂಭವಿಸಿದ ನಂತರ ನಾನು ಪ್ರಜ್ಞಾಹೀನನಾಗಿದ್ದ ಕಾರಣದಿಂದ ಅದೇ ದಿನ ದೂರು ದಾಖಲಿಸಲು ಸಾಧ್ಯ ಆಗಲಿಲ್ಲ. ಅಪಘಾತ ಸಂಭವಿಸಿದ ಮರುದಿನ ನನ್ನ ತಮ್ಮ ನನ್ನನ್ನು ನೋಡಲು ಆಸ್ಪತ್ರೆಗೆ ಬಂದಿರುತ್ತಾನೆ. ನಾನು ಚಾಲಕನಾಗಿ ಬೇರೆ ಕಡೆ ಅಪಘಾತಪಡಿಸಿಕೊಂಡಿದ್ದ ಕಾರಣದಿಂದ ಮರುದಿನ ನಾನು ಪ್ರಶ್ನಿತ ಮೋಟಾರು ಬೈಕನ್ನು ಪ್ರಕರಣದಲ್ಲಿ ಫಿಕ್ಸ್ ಮಾಡಿ ಸುಳ್ಳು ದೂರನ್ನು ದಾಖಲ್ಮಾಡಿಸಿರುತ್ತೇನೆಂದರೆ ಸರಿಯಲ್ಲ. ನಾನು ತಿಂಗಳಿಗೆ 30 ಸಾವಿರ ರೂ. ಆದಾಯ ಹೊಂದಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಚಾಲಕನಾಗಿ ಕೆಲಸ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.